ಕೊಲ್ಲಬೇಕೆಂದು ಉಪಾಯ ಮಾಡಿದ. ಅಲ್ಲೇ ಒಂದು ಮರದ ರೆಂಬೆಯ ಮೇಲೆ ಇದ್ದ ಆ ಹಕ್ಕಿ ಇವಾನನೊಂದಿಗೆ ಮಾತನಾಡಬೇಕೆಂದು ಅವನ ಬಳಿ ಬಂದಾಗ ಅವನು ಒಂದು ಕಲ್ಲನ್ನು ತೆಗೆದುಕೊಂಡು ಅದರ ಕಡೆ ಬೀಸಿ ಎಸೆದನು. ಹಕ್ಕಿ ತಪ್ಪಿಸಿಕೊಂಡಿತು, ಆದರೂ ಸ್ವಲ್ಪ ಗಾಯವಾಯಿತು. ಆ ಹಕ್ಕಿ ಇನ್ನೂ ಬದುಕೇ ಇದೆಯಲ್ಲ ಎಂದು ಅವನಿಗೆ ಬೇಸರವಾದರೂ, ಅವನು ವಿಷಯವನ್ನು ಮರೆತು ಸುಖವಾಗಿದ್ದನು.

ಕೆಲವು ವರ್ಷಗಳ ನಂತರ ರಾಜನಿಗೆ ಇನ್ನೊಂದು ಕನಸು ಬಿತ್ತು. ಮಂಜು ಬಿಳುಪಿನ ಕುರಿಮರಿಗಳು ತನ್ನ ಅರಮನೆಯ ಸುತ್ತ ನೆಗೆದಾಡುತ್ತಿರುವಂತೆ ಕನಸಾಯಿತು. ಆಗ ಅವನು ದೂತರನ್ನು ಇವಾನನ ಬಳಿಗೆ ಕಳುಹಿಸಿದ. ಅದರ ಅರ್ಥ ತಿಳಿಯದ ಇವಾನನು ತನಗೆ ಅರಮನೆಗೆ ಬರಲು ಇಷ್ಟವಿಲ್ಲವೆಂದು ಹೇಳಿ ಕಳಿಸಿದ. ಇದರಿಂದ ಕುಪಿತನಾದ ರಾಜ ತನ್ನ ಸೈನ್ಯದ ಮುಖ್ಯಾಧಿಕಾರಿಗೆ ಅವನನ್ನು ಕರೆತರಲು ಅಪ್ಪಣೆ ಮಾಡಿದ. ರಾಜನ ಆಜ್ಞೆಯನ್ನು ಮೀರಿದರೆ ಕೊಲ್ಲುವೆನೆಂದು ಸೈನ್ಯಾಧಿಕಾರಿ ಇವಾನನಿಗೆ ಹೇಳಿದ. ಸೈನ್ಯಾಧಿಕಾರಿ ಹೋದ ಮೇಲೆ ಇವಾನನು ತಾನು ಹಕ್ಕಿಗೆ ಮಾಡಿದ ಅನ್ಯಾಯದ ಬಗ್ಗೆ ಯೋಚಿಸಿ ಕಣ್ಣೀರು ಸುರಿಸಿದ. ಪಶ್ಚಾತಾಪ ಪಡುತ್ತ ಆ ಹಕ್ಕಿ ವಾಸಿಸುತ್ತಿದ್ದ ಮರದ ಕೆಳಗೆ ಹೋಗಿ ನಿಂತ. ಹಕ್ಕಿಯು ಅವನನ್ನು ನೋಡಿ 'ಕನಸಿನ ಬಗ್ಗೆ ತಿಳಿಯಬೇಕಿದ್ದರೆ ನನಗೆ ಬಹುಮಾನದಲ್ಲಿ ಅರ್ಧವನ್ನು ಕೊಡುವೆಯಾ?' ಎಂದು ಪ್ರಶ್ನಿಸಿತು. ಇದಕ್ಕೆ ಉತ್ತರವಾಗಿ ಅವನು 'ನನಗೆ ಬಂದ ಹಣವನ್ನೆಲ್ಲಾ ನಿನಗೇ ಕೊಡುತ್ತೇನೆ, ನನ್ನನ್ನು ನಂಬು' ಎಂದ. ಹಕ್ಕಿಯು ಕನಸಿನ ಅರ್ಥವನ್ನ ಹೇಳಿತು, 'ಈಗ ರಾಜ್ಯದಲ್ಲಿ ಶಾಂತಿ ಹಾಗೂ ನ್ಯಾಯ ತುಂಬಿದೆ, ಯಾವುದೇ ಆತಂಕವಿಲ್ಲ ಎಂದು ರಾಜನಿಗೆ ತಿಳಿಸು' ಎಂದಿತು.

ಇವಾನನು ದೊರೆಯನ್ನು ಕಂಡು ಅದನ್ನು ಹೇಳಿದ. ಈ ಬಾರಿ ರಾಜನು ಹಿಂದೆ ಕೊಟ್ಟಿದ್ದಕ್ಕಿಂತ ಹೆಚ್ಚು ಹಣವನ್ನು ಕೊಟ್ಟ. ಇವಾನನು ಅದನ್ನು ತೆಗೆದುಕೊಂಡು ನೇರವಾಗಿ ಹಕ್ಕಿಯ ಬಳಿ ಹೋಗಿ 'ನನ್ನ ನಡತೆಗಾಗಿ ಕ್ಷಮಿಸು, ಈ ಹಣವನ್ನು ಸ್ವೀಕರಿಸು, ಎಂದು ಕೇಳಿಕೊಂಡ. ಅದಕ್ಕೆ ಹಕ್ಕಿಯು 'ಮೊದಲ ಬಾರಿ ನೀನು ಮೋಸಮಾಡಲು ಕಾರಣ ವಾತಾವರಣದಲ್ಲಿ ಮೋಸ ತುಂಬಿತ್ತು. ಎರಡನೇ ಬಾರಿ ವಾತಾವರಣದಲ್ಲಿ ಹಿಂಸೆ ಇದ್ದುದರಿಂದ ನೀನು ಹಿಂಸಕನಾದೆ. ಈಗ ಎಲ್ಲೆಡೆ ನ್ಯಾಯ ಹಾಗೂ ನಿಷ್ಠೆ ಇರುವುದರಿಂದ ನೀನು ನಿಷ್ಠಾವಂತನಾದೆ. ವಾತಾವರಣದಿಂದ ಪ್ರಭಾವಿತನಾಗಿ ಹೀಗೆ ಮಾಡಿದೆ. ನಿನ್ನ ಹಣದಿಂದ ನನಗೆ ಉಪಯೋಗವಿಲ್ಲ, ಹಣ ಬೇಕಾಗಿದ್ದರೆ ನಾನೇ ರಾಜನ ಬಳಿ ಹೋಗಿ ಕನಸಿನ ಬಗ್ಗೆ ಹೇಳಿರುತ್ತಿದ್ದೆ. ಹಣವನ್ನು ನೀನೇ ಇಟ್ಟುಕೊಂಡು ವಿವೇಕಿಯಾಗಿ ಬಾಳು' ಎಂದು ಹಾರಿ ಹೋಯಿತು.

**-ಶಾರದಾ ಪಿ.ಬಿ., ಬೆಂಗಳೂರು**



ಗಣೇಶ್ ಅಣ್ಣಿಗೆರೆ

# ನಮ್ಮ ಪ್ರಾಣದಾತರು

**ನೋ**ಡು ಆಚೆ ದೂರದಲ್ಲಿ
ಹಿಮದ ರಾಶಿ ಮಡಿಲಿನಲ್ಲಿ
ಕೊರೆವ ಚಳಿಯ ತವರಿನಲ್ಲಿ
ಗಡಿಯ ಕಾಯುತಿಹರು ಯೋಧರು
ನಮ್ಮ ಆಶ್ರಯದಾತರು

ಮಳೆಗೆ ಚಳಿಗೆ ಬೆದರದೆ
ನಿದ್ದೆ ಸ್ನಾನಗಳೆಂಬುದಿಲ್ಲದೆ
ಹಗಲಿರುಳ ಭೇದ ಕಾಣದೆ
ಸದಾ ಕಾರ್ಯನಿರತರಾಗಿಹರು
ನಮ್ಮೆಲ್ಲರ ರಕ್ಷಣಾದಾತರು

ಬಂಧುಗಳಿಂದ ದೂರ ನಿಂತು
ಮಾತೃಭೂಮಿ ನೆನೆದು ನೆನೆದು
ಕಟ್ಟೆಚ್ಚರದಿ ಕಣ್ಣ ತೆರೆದು
ಹದ್ದಿನ ದೃಷ್ಟಿ ಹೊತ್ತಿಹರು,
ನಾಡ ರಕ್ಷಕರಾಗಿ ನಮ್ಮ ಯೋಧರು

ಜೀವದಾಸೆ ಹಂಗು ತೊರೆದು
ಶತ್ರು ಗುಂಡಿಗೆ ಎದೆಯ ತೆರೆದು
ದೇಶಕಾಗಿ ಜೀವ ಮುಡಿಪು ಎಂದು
ಶಾಂತಿಗಾಗಿ ನಿರಂತರ ನಿಂತಿಹರು,
ನಿಜದಿ ಭಾರತ ಭಾಗ್ಯವಿಧಾತರು

ಹಬ್ಬದೂಟ ಅವರಿಗೆಲ್ಲಿ?
ಜಾತ್ರೆ ಯಾತ್ರೆ ತಿರುಗುವುದೆಲ್ಲಿ?
ಸುಖದ ಸೋನೆ ಸೊಬಗು ಎಲ್ಲಿ?
ನಿತ್ಯ ಕಾರ್ಯ ತತ್ಪರರು ಅವರು,
ಗಡಿಯ ಭಾರ ಹೊತ್ತ ಯೋಧರು

ಅವರ ಸ್ಮರಣೆ ನಮ್ಮಲಿರಲಿ
ಅವರ ತ್ಯಾಗ ನಮ್ಮ ನೆನಹಿನಲ್ಲಿರಲಿ
ನಮ್ಮೆದೆಯಲ್ಲವರು ಮಿಡಿಯುತಿರಲಿ
ಹೃದಯದಲ್ಲವರು ಸ್ಫುರಿಸುತಲಿರಲಿ;
ಅವರೇ ನಮ್ಮ ಪ್ರಾಣದಾತರು.

**-ವಂದಗದ್ದೆ ಚಂದ್ರಮೌಳಿ, ಸಾಗರ**

## ನಿಮಗೆಷ್ಟು ಗೊತ್ತು

## ಭಾರತೀಯ ಸಂಖ್ಯಾ ಸ್ಥಾನಬೆಲೆಗಳು

| | |
|---|---|
| ಬಿಡಿ | ಮಹಾಶಂಖ (ನೂರುಸಾವಿರ ಶಂಖ) |
| ಹತ್ತು | ಬೃಂದ (ನೂರು ಸಾವಿರ ಮಹಾಶಂಖ) |
| ನೂರು | ಮಹಾಬೃಂದ (ನೂರುಸಾವಿರ ಬೃಂದ) |
| ಸಾವಿರ | ಪದ್ಮ (ನೂರು ಸಾವಿರ ಮಹಾಬೃಂದ) |
| ಹತ್ತು ಸಾವಿರ | ಮಹಾಪದ್ಮ (ನೂರುಸಾವಿರ ಪದ್ಮ) |
| ಲಕ್ಷ | ಖರ್ವ (ನೂರುಸಾವಿರ ಮಹಾಪದ್ಮ) |
| ಹತ್ತು ಲಕ್ಷ | ಮಹಾಖರ್ವ (ನೂರುಸಾವಿರ ಖರ್ವ) |
| ಕೋಟಿ | ಸಮುದ್ರ (ನೂರುಸಾವಿರ ಮಹಾಖರ್ವ) |
| ಹತ್ತು ಕೋಟಿ | ಮಹಾಸಮುದ್ರ (ನೂರುಸಾವಿರ ಸಮುದ್ರ) |
| ಶತಕೋಟಿ | ಓಘ (ನೂರು ಸಾವಿರ ಮಹಾಸಮುದ್ರ) |
| ಸಹಸ್ರಕೋಟಿ | ಮಹಾಓಘ (ನೂರುಸಾವಿರ ಓಘ) |
| ಹತ್ತುಸಾವಿರ ಕೋಟಿ | |
| ಶಂಖ (ನೂರು ಸಾವಿರ ಕೋಟಿ) | |

**(ಸಂಗ್ರಹ) ಪ.ನಾ.ಹಳ್ಳಿ.ಹರೀಶ್ ಕುಮಾರ್**